ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಯೋಜನೆಗಳ ಪ್ರಗತಿ ಬಗ್ಗೆ

ಶ್ರೀ ಪಿ. ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) :-

56 (46) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯ ಸರ್ಕಾರ ಕಳೆದ 5 ವರ್ಷಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಸವಿತಾ ಸಮಾಜ, ಕುಂಬಾರ, ಮಡಿವಾಳ, ತಿಗಳ ಸಮುದಾಯಗಳ ಆರ್ಥಿಕ/ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ನೀಡಿರುವ ಆರ್ಥಿಕ ನೆರವು ಹಾಗೂ ಕಾರ್ಯಕ್ರಮಗಳು ಮತ್ತು ಯೋಜನೆಗಳ ವರ್ಷವಾರು ಮಾಹಿತಿ ನೀಡುವುದು;

(ಆ) 2016-17, 2017-18 ಹಾಗೂ 2018-19 ರಲ್ಲಿ ಶೈಕ್ಷಣಿಕವಾಗಿ ತಿಗಳ ಜನಾಂಗ ಮತ್ತು ಅದರ ಉಪಜಾತಿಗಳಿಗೆÀ ಸಂಬಂಧಪಟ್ಟ ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿದೆ ; ವೃತ್ತಿ ತರಬೇತಿ ಶಿಕ್ಷಣಕ್ಕೆ ನೀಡಿರುವ ಅನುದಾನ ಎಷ್ಟು ;

(ಇ) ವಿದೇಶದಲ್ಲಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಎಷ್ಟು ಅನುದಾನ ಮೀಸಲಿರಿಸಲಾಗಿದೆ ; ಎಷ್ಟು ಸಂಖ್ಯೆಯಲ್ಲಿ ಗುರುತಿಸಿ ಕಳುಹಿಸಿಕೊಡಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಈ) 2016-17, 2017-18, 2018-19 ಹಾಗೂ 2019-20 ರಲ್ಲಿ ತಿಗಳ ಸಮುದಾಯಕ್ಕೆ ನೀಡಿರುವ ಒಟ್ಟು ಅನುದಾನ ಹಾಗೂ ಯೋಜನೆಗಳಿಗೆ ವಿನಿಯೋಗವಾಗಿರುವ ಅನುದಾನವೆಷ್ಟು? (ಸಂಪೂರ್ಣ ಮಾಹಿತಿಯನ್ನು ನೀಡುವುದು)